





# ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

## ಭಾಗ ೮

ಖಗೇನ್, ಹರಿಪದ, ಸುಧೀರ್, ಸುಶೀಲ್ ಮುಂತಾದ ಆಧ್ಯಾತ್ಮಿಕ ಸ್ನೇಹಿತರು ಇಷ್ಟು ದಿನಗಳ ನಂತರ ಕಾಳೀಕೃಷ್ಣನನ್ನು ಮನೆಯಲ್ಲಿ ಕಂಡು, ಪ್ರತಿದಿನವೂ ಸಂಜೆಯ ವೇಳೆಗೆ ಬಂದು ಅವನ ಬಳಿ ಮಾತನಾಡಿ ಹೋಗುತ್ತಿದ್ದರು. ಕಾಳೀಕೃಷ್ಣನು ಮಠದಲ್ಲೇ ಇದ್ದು ಬಂದದ್ದರಿಂದ, ಅಲ್ಲಿ ಶ್ರೀರಾಮಕೃಷ್ಣರ ಬಗ್ಗೆ ಕೇಳಿದ್ದ ಹೊಸ ಸಂಗತಿಗಳನ್ನು ತನ್ನ ಸ್ನೇಹಿತರಿಗೆ ಹೇಳುತ್ತಿದ್ದನು. ಎಲ್ಲರೂ ತನ್ಮಯರಾಗಿ ಅದನ್ನು ಕೇಳುತ್ತಿದ್ದರು. ಶ್ರೀರಾಮಕೃಷ್ಣರ ಭಕ್ತನಾದ 'ಹುಟ್ಕೋ ಗೋಪಾಲ'ನ[೧] ಮನೆ ಕೂಡ ಕಾಳೀಕೃಷ್ಣನ ಮನೆಯ ಹತ್ತಿರವೇ ಇತ್ತು. ಅವನೂ ಸಹ ಈ ಗುಂಪಿನೊಂದಿಗೆ ಸೇರಿ ಕಾಶೀಪುರದ ತೋಟದ ಮನೆ ಹಾಗೂ ವರಾಹನಗರದ ಪ್ರಾರಂಭದ ದಿನಗಳ ಅನೇಕ ವಿಷಯಗಳನ್ನು ಹೇಳುತ್ತಿದ್ದ. ಈ ರೀತಿ ೨-೩ ಗಂಟೆಗಳು ಕಳೆದದ್ದೇ ತಿಳಿಯುತ್ತಿರಲಿಲ್ಲ. ಜಪ-ಧ್ಯಾನದ ಸಮಯವು ಈ ರೀತಿ ಕಳೆದು ಹೋಗುತ್ತಿದ್ದುದರಿಂದ ಕಾಳೀಕೃಷ್ಣನು ತನ್ನ ನಿರ್ದಿಷ್ಟ ಸಂಖ್ಯೆಯ ಜಪವನ್ನು ಪೂರ್ಣಗೊಳಿಸಲು ರಾತ್ರಿ ಬಹಳ ಹೊತ್ತು ಹಿಡಿಯುತ್ತಿತ್ತು. ಇದರಿಂದಾಗಿ ತನಗೆ ಕಷ್ಟವಾಗುತ್ತಿದೆಯೆಂದು ಕಾಳೀಕೃಷ್ಣನು ತನ್ನ ಸ್ನೇಹಿತರಿಗೆ ಮನಬಿಚ್ಚಿ ಹೇಳಿದನು. ಆಗ ಎಲ್ಲರೂ ಸೇರಿ, ಯಾರಾದರೂ ಕಾಳೀಕೃಷ್ಣನನ್ನು ನೋಡಲು ಬಂದರೆ, ಐದು ನಿಮಿಷಕ್ಕಿಂತ ಜಾಸ್ತಿ ಮಾತುಕತೆ ನಡೆಸಬಾರದು ಎಂಬ ನಿರ್ಧಾರಕ್ಕೆ ಬಂದರು. ಆದರೆ ಅದನ್ನು ಚಾಚೂ ತಪ್ಪದೆ ಪಾಲಿಸಲಾಗುತ್ತಿರಲಿಲ್ಲ. ಆದರೆ ಅಂದಿನಿಂದ ಮಾತುಕತೆಯ ವಿಷಯದಲ್ಲಿ ಇವನ ಸಮಯ ಅರ್ಧ ಗಂಟೆಯನ್ನು ಮೀರುತ್ತಿರಲಿಲ್ಲ. ಅವನು ಸಂಕಲ್ಪಿಸಿದ್ದಂತೆ ದಿನವೂ ಜಪ-ಧ್ಯಾನಗಳು ಸಾಂಗವಾಗಿ ನಡೆಯತೊಡಗಿದವು. ಆ ಸಮಯದಲ್ಲಿ ಕಾಳೀಕೃಷ್ಣನಿಗೆ ಜಪ-ಧ್ಯಾನದಲ್ಲಿ ಒಂದು ರೀತಿಯ ತನ್ಮಯತೆ ಬಂದಿತ್ತು. ಮುಂದೊಮ್ಮೆ ಮಾತಿನ ನಡುವೆ ಹೀಗೆ ಹೇಳಿದ್ದನು, ''ಆ ರೀತಿಯ ಸಾಧನೆಯನ್ನು ಜೀವನದಲ್ಲಿ ಸ್ವಲ್ಪ ಕಾಲ ಮಾತ್ರವಷ್ಟೇ ಮಾಡಿರುವೆ ಎಂದೆನಿಸುತ್ತದೆ.'' ಎಲ್ಲಿ ಜಪ-ಧ್ಯಾನದ ಸಮಯ ಕಡಿಮೆಯಾಗಿ ಬಿಡುವುದೋ ಎಂದು ಮಠಕ್ಕೆ ಹೋಗುವುದು ಹಾಗಿರಲಿ, ಶ್ರೀಮಾತೆಯವರ ದರ್ಶನಕ್ಕೂ ಸಹ ಅವನು ಹೆಚ್ಚಾಗಿ ಹೋಗುತ್ತಿರಲಿಲ್ಲ.

ಕೆಲವೊಮ್ಮೆ ಆಲಂಬಜಾರ್ ಮಠದಿಂದ ಸಂನ್ಯಾಸಿಗಳು ಕಾಳೀಕೃಷ್ಣನನ್ನು ನೋಡಲು ಬರುತ್ತಿದ್ದರು. ಒಮ್ಮೆ ಬಹಳ ದಿನಗಳಿಂದ ಕಾಳೀಕೃಷ್ಣನು ಮಠಕ್ಕೆ ಹೋಗದ್ದರಿಂದ ಅವನು ಕೋಪಿಸಿಕೊಂಡಿದ್ದಾನೆಂದು ಶರತ್ ಮಹಾರಾಜರು ಭಾವಿಸಿದರು. ಒಂದು ಸಂಜೆ ಕಾಳೀಕೃಷ್ಣನು ತನ್ನ ಕೊಠಡಿಯಲ್ಲಿ ಜಪ-ಧ್ಯಾನಗಳಲ್ಲಿ ನಿರತನಾಗಿದ್ದಾಗ, ಹೊರಗಿನಿಂದ ಸ್ತ್ರೀ ಕಂಠದಂತಹ ಮೃದು ಧ್ವನಿಯೊಂದು, 'ಕಾಳೀಕೃಷ್ಣ ಕಾಳೀಕೃಷ್ಣ' ಎಂದು ಕರೆಯುತ್ತಿರುವುದು ಕೇಳಿಸಿತು. ಹೊರಗೆ ಬಂದು ನೋಡಿದರೆ ಶರತ್ ಮಹಾರಾಜರು. (ಅವರ ಕಂಠ ಉಚ್ಚಸ್ವರದ್ದಾಗಿತ್ತು.) ಕಾಳೀಕೃಷ್ಣನನ್ನು ಕಂಡು ಶರತ್ ಮಹಾರಾಜರು ಅವನನ್ನು ಎದೆಗಪ್ಪಿಕೊಂಡರು. ಕಾಳೀಕೃಷ್ಣನೂ ಅಳಲಾರಂಭಿಸಿದ. ಹೀಗೆಯೇ ಬಾಬುರಾಮ್ ಮಹಾರಾಜ್, ಖೋಕಾ ಮಹಾರಾಜ್, ನಿರಂಜನ್ ಮಹಾರಾಜ್, ಶಾರದಾ ಮಹಾರಾಜ್ ಮುಂತಾದವರು ಕಾಳೀಕೃಷ್ಣನಿದ್ದ ನಾರಿಕೇಲ್ ಡಂಗಾದ ಮನೆಗೆ ಒಂದೆರಡು ಸಲ ಹೋಗಿ ಬಂದಿದ್ದರು. ಹೀಗೆ ಅವರು ಬಂದಾಗಲೆಲ್ಲ ಕಾಳೀಕೃಷ್ಣನ ತಾಯಿ ಅವರನ್ನು ತುಂಬ ಉಪಚರಿಸಿ, ಏನನ್ನಾದರೂ ತಿನ್ನಿಸುತ್ತಿದ್ದರು.

ಹೀಗೆ ನಿರಂತರ ಸಾಧನೆಯ ಆವೇಗದಲ್ಲಿ ಸುಮಾರು ೧೪-೧೫ ತಿಂಗಳು ಕಳೆದುಹೋದವು. ಅಷ್ಟರಲ್ಲಿ ಅದೆಂತಹ ವಿಘ್ನಗಳು ಬಂದವೆಂದರೆ, ಕಾಳೀಕೃಷ್ಣನ ಮನಸ್ಸು ಇದರಿಂದಾಗಿ ನಾನಾ ರೀತಿಯ ಅಶಾಂತಿಯಿಂದ ಬಳಲತೊಡಗಿತು. ಅದೇನೆಂದರೆ - ಇಷ್ಟು ದಿನವೂ ಅವನ ತಾಯಿ, ತಂದೆಯರು ಅವನ ಸಾಧನೆಯ ಪಥದಲ್ಲಿ ಸ್ವಾತಂತ್ರ್ಯವನ್ನಿತ್ತಿದ್ದರು; ಎಂದೂ ಮನೆಯ ಯಾವ ಕೆಲಸವನ್ನೂ ಹೇಳುತ್ತಿರಲಿಲ್ಲ. ಆದರೆ ಬಹಳ ದಿನಗಳಿಂದ ಮಗ ತಮ್ಮ ಬಳಿಯಲ್ಲೇ ಉಳಿದುಕೊಂಡಿದ್ದರಿಂದ, ತಾಯಿತಂದೆಗಳಿಗೆ

---

೧ ಆತನ ಪೂರ್ತಿ ಹೆಸರು ಗೋಪಾಲಚಂದ್ರ ಘೋಷ್. ಶ್ರೀರಾಮಕೃಷ್ಣರು ಕಾಶೀಪುರದ ತೋಟದಲ್ಲಿ ಇದ್ದಾಗಿನಿಂದ ಇವನು ಅವರಲ್ಲಿಗೆ ಹೋಗಿ ಬರಲಾರಂಭಿಸಿದ್ದ. ಅವನಿಗೆ ಸ್ವಾಮೀಜಿ ಬಗ್ಗೆ ಬಹಳ ಪ್ರೀತ್ಯಾದರ ಇತ್ತು ಮತ್ತು ಅವರ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಡುತ್ತಿದ್ದ. ಸ್ವಾಮೀಜಿಯೇ ಇವನಿಗೆ 'ಹುಟ್ಕೋ' ಹೆಸರನ್ನು ಕೊಟ್ಟಿದ್ದರು. ಕಾರಣ, ಇವನು ಯಾವಾಗಲೆಂದರೆ ಆಗ 'ಹುಟ್' ಎಂದು ಪ್ರತ್ಯಕ್ಷನಾಗಿ, ಮತ್ತೆ ಯಾರಿಗೂ ಹೇಳದೇ ಕೇಳದೇ 'ಹುಟ್' ಎಂದು ಮಾಯವಾಗುತ್ತಿದ್ದ. ಶ್ರೀರಾಮಕೃಷ್ಣರ ಸಮಾಧಿಯ ನಂತರ ಸ್ವಾಮೀಜಿಯ ಮಾತಿನ ಮೇರೆಗೆ ಸುರೇಂದ್ರನಾಥ ಮಿತ್ರನು ಇವನಿಗೆ ಒಂದು ಆಫೀಸಿನಲ್ಲಿ ಕೆಲಸ ಕೊಡಿಸಿದ್ದ. ಇವನ ಮುಖ್ಯ ಕೆಲಸವೇನೆಂದರೆ ವರಾಹನಗರ ಮಠದ ಸಂನ್ಯಾಸಿಗಳ ಸುದ್ದಿ- ಸಮಾಚಾರವನ್ನು ಸುರೇಂದ್ರನಿಗೆ ಬಂದು ಹೇಳುವುದು. ಹುಟ್ಕೋ ಗೋಪಾಲನು ಮಠಕ್ಕೆ ಬಂದು ಉಗ್ರಾಣದ ಜಾಡಿ-ಮಡಕೆಗಳನ್ನು ತೆಗೆದು ಏನಿದೆ ಏನಿಲ್ಲವೆಂಬುದನ್ನು ನೋಡಿಕೊಂಡು, ಸುರೇಂದ್ರನು ಕೊಟ್ಟ ಹಣದಿಂದ ಬೇಕಾದ್ದನ್ನು ಮಾರುಕಟ್ಟೆಯಿಂದ ಕೊಂಡು ತರುತ್ತಿದ್ದನು. ಅವನಿಗೆ ಮಠಕ್ಕೆ ಸೇರಲು ಬಹಳ ಇಚ್ಛೆಯಿದ್ದಿತಾದರೂ ವಯಸ್ಸಾದ ತಾಯಿಯ ಸೇವೆ ಹಾಗೂ ಇನ್ನಿತರ ಸಾಂಸಾರಿಕ ಜಂಜಾಟಗಳಿಂದಾಗ ಆತನ ಇಚ್ಛೆ ಪೂರೈಸಲಿಲ್ಲ. ಸ್ವಾಮೀಜಿಯವರು ಅಮೇರಿಕಾದಿಂದ ತಮ್ಮ ಗುರುಭಾಯಿಗಳಿಗೆ ಕೆಲವು ಬರೆದ ಪತ್ರಗಳಲ್ಲಿ 'ಹುಟ್ಕೋ'ನ ಬಗ್ಗೆ ವಿಚಾರಿಸಿದ್ದು ಕಂಡುಬರುತ್ತದೆ.

ಇರುವ ಸುಪ್ತವಾದ ಬಾಧ್ಯತೆಯು ಅವನ ಮೇಲೆ ಸಹಜವಾಗಿ ಜಾಗೃತಗೊಂಡಿತು. ತಂದೆಯು ಚಿಕಿತ್ಸಾಲಯದ ಕೆಲಸ ಮುಗಿಸಿ ಬರಲು ರಾತ್ರಿ ಹನ್ನೆರಡಾಗುತ್ತಿತ್ತು. ಕಾಳೀಕೃಷ್ಣನು ಇನ್ನೂ ಮಲಗಿಲ್ಲದ್ದನ್ನು ಕಂಡು ತಾಯಿ ಅವನಿಗೆ ತಂದೆಯ ಊಟಕ್ಕೆ ಅಣಿ ಮಾಡಲು ಹೇಳುತ್ತಿದ್ದಳು – ಊಟಕ್ಕೆ ಆಸನ ಹಾಕುವುದು, ತಟ್ಟೆ ತಂದಿಡುವುದು, ನೀರಿನ ಲೋಟ ಇಡುವುದು, ತಂದೆಗೆ ಸ್ವಲ್ಪ ಗಾಳಿ ಹಾಕುವುದು ಇತ್ಯಾದಿ ಸಣ್ಣ-ಪುಟ್ಟ ಕೆಲಸ ಮಾಡಲು ಹೇಳುತ್ತಿದ್ದಳು. ತಂದೆಯೂ ಸಹ ಊಟದ ನಂತರ ಸ್ವಲ್ಪ ಅಂಗಮರ್ದನ ಮಾಡಲೋ, ದಿನಪತ್ರಿಕೆಯನ್ನು ಓದಿ ಹೇಳಲೋ[೨] ಹೇಳುತ್ತಿದ್ದನು. ಕಾಳೀಕೃಷ್ಣನು ಅವರ ಮಗನೇನೋ ನಿಜ; ಹೆತ್ತವರು ಅವನಿಂದ ಅಲ್ಪಸ್ವಲ್ಪ ಸೇವೆಯನ್ನು ಆಶಿಸಿದರೆ ಅದು ಅನುಚಿತವೇನಲ್ಲ. ಆದರೆ ಆಗ ಕಾಳೀಕೃಷ್ಣನು ಸಾಧನೆಯಲ್ಲಿ ಎಷ್ಟೊಂದು ಮುಳುಗಿ ಹೋಗಿದ್ದನೆಂದರೆ, ಈ ರೀತಿಯ ಕೆಲಸಗಳಲ್ಲಿ ಕೆಲವು ಗಂಟೆಗಳು ಕಳೆದು ಹೋದರೆ ಅವನು ಬಹಳ ಅಶಾಂತಿಯನ್ನು ಅನುಭವಿಸುತ್ತಿದ್ದ. ತಾಯಿಗೆ ಎಲ್ಲವನ್ನೂ ಬಿಡಿಸಿ ಹೇಳಿದ. ಆದರೆ ತ್ರೈಲೋಕ್ಯನೆಲ್ಲಿ ಕೋಪಗೊಳ್ಳುವನೋ ಎಂದು ಹೆದರಿ, ತಾಯಿ ಆತನಿಗೆ ಈ ವಿಷಯವಾಗಿ ಏನನ್ನೂ ಹೇಳಲಾಗಲಿಲ್ಲ.

ಇದಲ್ಲದೆ, ಮಾನಸಿಕ ಅಸ್ವಸ್ಥತೆಗೆ ಕಾರಣವಾಗುವಂತಹ ಮತ್ತೊಂದು ಸಂದರ್ಭವೂ ಬಂದೊದಗಿತು. ತಂದೆ ತ್ರೈಲೋಕ್ಯನು ತನ್ನ ನಾರಿಕೇಲ್‌ಡಂಗಾದ ಮನೆಗೆ ಒಂದು ಮೈಲಿ ದೂರದಲ್ಲಿ ತೋಟದ ಜಮೀನೊಂದನ್ನು ಕೊಂಡುಕೊಂಡಿದ್ದನು. ಮನೆಗೆ ಬೇಕಾದ ತಾಜಾ ಹಣ್ಣು-ತರಕಾರಿಗಳನ್ನು ಬೆಳೆಯುವುದೇ ಅದರ ಉದ್ದೇಶ. ಆ ಸ್ಥಳವು ತುಂಬ ನಿರ್ಜನವಾಗಿತ್ತು. ಅಲ್ಲಿ ಎರಡು ಪುಷ್ಕರಣಿಗಳೂ, ಒಂದು ಕೊಠಡಿ ಹಾಗೂ ಅದರ ಮುಂದೆ ವರಾಂಡಾ ಇರುವ ಇಟ್ಟಿಗೆಯ ಮನೆಯೂ ಇತ್ತು. ಒಂದು ದಿನ ತ್ರೈಲೋಕ್ಯನಾಥನು ಕಾಳೀಕೃಷ್ಣನನ್ನು ಕರೆದು, ''ನೀನು ಹೇಗಿದ್ದರೂ ಏಕಾಂತದಲ್ಲಿ ಸಾಧನೆ ಮಾಡಲು ಇಚ್ಛಿಸುವೆ. ಒಂದು ವೇಳೆ ನೀನು ಊಟದ ನಂತರ ದಿನವೂ ತೋಟಕ್ಕೆ ಹೋಗಿ ಅಲ್ಲಿಯೇ ಸಂಜೆಯವರೆಗೂ ಇರುವುದಾದರೆ ನಿನ್ನ ಸಾಧನೆಗೂ ಅನುಕೂಲವಾಗುತ್ತದೆ, ಮಾಲಿಯೂ ಆಲಸ್ಯ ಮಾಡುವುದು ತಪ್ಪುತ್ತದೆ. ಅಷ್ಟೇ ಅಲ್ಲದೆ, ನೀನೂ ಸಹ ಅವನಿಗೆ ಸ್ವಲ್ಪ direction (ಸಲಹೆ) ನೀಡಬಹುದು. ಇದರಿಂದ ನಿನಗೆ ವಿಶೇಷ ಹಾನಿಯೇನೂ ಆಗುವುದಿಲ್ಲವಲ್ಲ!'' ಎಂದು ಕೇಳಿದರು. ಕಾಳೀಕೃಷ್ಣನು ಸಹ ತಂದೆಯ ಪ್ರಸ್ತಾವಕ್ಕೆ ಒಪ್ಪಿದನು; ಹಾಗೆಯೇ ಮಾಡಲಾರಂಭಿಸಿದನು. ಕೆಲವೊಮ್ಮೆ ಊಟವನ್ನು ತೆಗೆದುಕೊಂಡು ಹೋಗಿ ರಾತ್ರಿಯನ್ನೂ ತೋಟದಲ್ಲೇ ಕಳೆಯುತ್ತಿದ್ದನು. ಇವರ ಬಳಗದ ಖಗೇನ್ ಮುಂತಾದವರೂ ಆಗಾಗ ಬಂದಿದ್ದು ರಾತ್ರಿ ಅಲ್ಲೇ ಕಳೆಯುತ್ತಿದ್ದರು. ಹಾಗೆ ಬಂದಾಗ ಕಿಚಡಿ ತಯಾರು ಮಾಡಿ ತಿನ್ನುತ್ತಿದ್ದರು. ಹಾಡು-ಸಂಕೀರ್ತನೆಗಳಲ್ಲಿ ಮಗ್ನರಾಗುತ್ತಿದ್ದರು; ಜಪ-ಧ್ಯಾನಗಳನ್ನೂ ಸಹ ಬಹಳವಾಗಿಯೇ ಮಾಡುತ್ತಿದ್ದರು. ತೋಟದ ಮನೆಯಲ್ಲಿ ಹಿಂದಿನ ಮಾಲೀಕನಿಗೆ ಸೇರಿದ ಕಾಳೀಮಾತೆಯ ಸುಂದರವಾದ ಚಿತ್ರಪಟವೊಂದಿತ್ತು. ಅದರಲ್ಲಿ ಚಿತ್ರಕಾರನು ತಾಯಿಯ ರುದ್ರ ಹಾಗೂ ಕೋಮಲ ಭಾವಗಳನ್ನು ಜೊತೆ ಜೊತೆಗೇ ಚಿತ್ರಿಸಿದ್ದನು. ತಾಯಿಯು ಹೇಗೆ ಕರುಣಾಮಯಿಯೋ ಪ್ರೇಮರೂಪಿಣಿಯೋ ಹಾಗೆಯೇ ರುದ್ರಭೀಷಣಳೂ ಸಹ. ಈ ಚಿತ್ರವು ಕಾಳೀಕೃಷ್ಣನ ಮನದಲ್ಲಿ ಚಿರಮುದ್ರೆಯನ್ನೊತ್ತಿತ್ತು.

ಮೊದಮೊದಲು ಕಾಳೀಕೃಷ್ಣನು ತೋಟದ ವಿಷಯದಲ್ಲಿ ಅಲ್ಪಸ್ವಲ್ಪ ನೋಡಿಕೊಳ್ಳುವುದನ್ನು ಬಿಟ್ಟು ವಿಶೇಷವಾಗಿ ತಲೆಯನ್ನೇನೂ ಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ ಬಾಲ್ಯದಿಂದಲೂ ಇದ್ದಂತಹ ತೋಟದ ಹವ್ಯಾಸ, ಅಭಿರುಚಿಗಳು ಈಗ ಅನುಕೂಲ ಸಂದರ್ಭ ಪಡೆದು ಮತ್ತೆ ತಲೆಯೆತ್ತಿ ನಿಂತಿತು. ಹೀಗಾಗಿ ಕ್ರಮೇಣ ತೋಟದ ಕೆಲಸವನ್ನು ತನ್ನ ಮೇಲೆ ಹಾಕಿಕೊಳ್ಳಲಾರಂಭಿಸಿದ. ಒಮ್ಮೊಮ್ಮೆ ತಂದೆಯೂ ಮಾಲಿಯಿಂದ ಅದನ್ನೋ ಇದನ್ನೋ ಮಾಡಿಸಲು ಹೇಳುತ್ತಿದ್ದರು. ಇದರಿಂದಾಗಿ ತುಂಬಾ ಸಮಯ ವ್ಯಯವಾಗುತ್ತಿತ್ತು. ಕೊನೆಗೆ ಹೇಗಾಯಿತೆಂದರೆ, ಧ್ಯಾನ ಮಾಡಲು ಕುಳಿತರೆ ತೋಟದ ಕೆಲಸಕಾರ್ಯಗಳ ಯೋಚನೆಯೇ ಬರಲಾರಂಭಿಸಿತು; ಧ್ಯಾನ ಮಾಡುತ್ತ ಒಮ್ಮೊಮ್ಮೆ ಎದ್ದುಹೋಗಿ, ಕೆಲಸದ ಮೇಲುಸ್ತುವಾರಿ ಮಾಡಿ ಬರಬೇಕಾಗುತ್ತಿತ್ತು. ಸಾಧನೆ ಭಜನೆಗಳಲ್ಲಿ ಮೊದಲಿಗೆ ಇದ್ದ ಆ ನಿಷ್ಠೆ ಮತ್ತು ಏಕತಾನತೆ ಈಗ ಶಿಥಿಲವಾದಂತಾಯಿತು. ಅಲ್ಲದೆ ರಾತ್ರಿ ಮನೆಗೆ ಬಂದಾಗ ಹಿಂದೆ ಹೇಳಿದಂತಹ ತಂದೆಯ ಕೆಲಸಗಳು ಇದ್ದೇ ಇರುತ್ತಿದ್ದವು.

ಶ್ರೀರಾಮಕೃಷ್ಣರು ಉದಾಹರಿಸಿದಂತಹ 'ಕೋಟೆಯ ಇಳಿಜಾರು ರಸ್ತೆ'ಯು ಪಯಣಿಗನನ್ನು ಗೊತ್ತಾಗದಂತೆ ತಳಕ್ಕೆ ಕರೆದೊಯ್ಯುವಂತೆ, ತಾನೂ ನಿಧಾನವಾಗಿ ಸಂಸಾರದಲ್ಲಿ ಬದ್ಧನಾಗುತ್ತಿರುವುದನ್ನು ನೋಡಿ ಕಾಳೀಕೃಷ್ಣನ ವಿವೇಕವು ಎಚ್ಚೆತ್ತುಕೊಂಡಿತು. ಗೀತೆಯಲ್ಲಿ ಹೇಳಿರುವ 'ಸಂಗಾತ್ ಸಂಜಾಯತೇ ಕಾಮಃ' ಎಂದರೆ ಇದೇ ಅಲ್ಲವೇ, ಎಂದುಕೊಂಡನು. 'ನಾನು ಮನೆಗೆ ಬಂದುದು ಇದಕ್ಕೇ ಏನು? ಶ್ರೀಮಾತೆಯವರು ಹೇಳಿದಂತೆ ನಡೆಯಲಾಗುತ್ತಿಲ್ಲವಲ್ಲ, ನಾನಾ ಪ್ರಕಾರದ ಮಾಯೆ, ಮೋಹಾಸಕ್ತಿಗಳು ಇಲ್ಲಿ ಬಂದು ಮುತ್ತುತ್ತಿವೆ. ಇಲ್ಲ! ಇನ್ನು ಸಾಧ್ಯವಿಲ್ಲ! ಈ ಬಂಧನಗಳನ್ನು ಬಲವಂತವಾಗಿ ಕಿತ್ತೊಗೆಯಲೇಬೇಕು' ಎಂದು ತೀರ್ಮಾನಿಸಿದನು. ಮಠದವರಿಗೆ ಎಲ್ಲವನ್ನೂ ವಿವರಿಸ

೨ ಸ್ವಾಮೀಜಿಯವರು ಅಮೇರಿಕಾದಲ್ಲಿ ನೀಡಿದ ಭಾಷಣ, ಸಂಭಾಷಣೆ ಇತ್ಯಾದಿಗಳು 'ಇಂಡಿಯನ್ ಮಿರರ್' ಎಂಬ ಪತ್ರಿಕೆಯಲ್ಲಿ ಆಗ ನಿಯಮಿತವಾಗಿ ಪ್ರಕಟವಾಗುತ್ತಿದ್ದವು. ಅವುಗಳನ್ನೂ ತ್ರೈಲೋಕ್ಯನು ಕೇಳಲಿಚ್ಛಿಸುತ್ತಿದ್ದನು; ಕಾಳೀಕೃಷ್ಣನೂ ಓದಿಹೇಳುತ್ತಿದ್ದನು. ತ್ರೈಲೋಕ್ಯನು ಸ್ವಾಮೀಜಿಯವರನ್ನು ಬಾಲ್ಯದಿಂದಲೂ ನೋಡಿದ್ದನು. ಸಿಮ್ಲಾದಲ್ಲಿ ಇವನ ಮನೆಯು ಸ್ವಾಮೀಜಿ ಮನೆಯ ಹತ್ತಿರವೇ ಇತ್ತು. ಇವನ ಒಬ್ಬ ತಮ್ಮ ಅಮೃತಲಾಲ್ ಬಸು; ಸ್ವಾಮೀಜಿಯವರ ಸಹಪಾಠಿ. ತ್ರೈಲೋಕ್ಯನಾಥನು ಕೆಲವು ದಿನ ಕೇಶವಚಂದ್ರ ಸೇನನ ಮನೆಯ (ಲಿಲಿ ಕಾಟೇಜ್) ಗೃಹಚಿಕಿತ್ಸಕನಾಗಿದ್ದ. ಬಹುಶಃ ಅಲ್ಲಿ ತ್ರೈಲೋಕ್ಯನು ಶ್ರೀರಾಮಕೃಷ್ಣರನ್ನೂ ಕಂಡಿದ್ದಿರಬಹುದು. ಕಾಳೀಕೃಷ್ಣನು ಗೃಹತ್ಯಾಗ ಮಾಡಿದ ನಂತರ ಹಾಗೂ ವರಾಹನಗರದ ಮಠದಿಂದ ಸಂನ್ಯಾಸಿಗಳು ಇವನ ಮನೆಗೆ ಬಂದು ಹೋಗುತ್ತಿದ್ದುದರ ಫಲವಾಗಿ ತ್ರೈಲೋಕ್ಯನಿಗೆ ಕ್ರಮೇಣ ಧಾರ್ಮಿಕ ವಿಷಯಗಳಲ್ಲಿ ಆಕರ್ಷಣೆ ಹೆಚ್ಚಾಗಿತ್ತು.

ಲಾಗಿ, ಅವರು ಕೆಲವು ದಿನಗಳ ಮಟ್ಟಿಗೆ ಕೊಲ್ಕತ್ತಾದಿಂದ ದೂರ ಹೋಗಿ ಇರಬೇಕೆಂದು ಸಲಹೆಯಿತ್ತರು. ಸ್ವಾಮಿ ಪ್ರೇಮಾನಂದರು ಆಗ ಬೃಂದಾವನದಲ್ಲಿದ್ದರು. ಅವರೊಂದಿಗಿದ್ದು ಸಾಧನೆಯನ್ನು ಮುಂದುವರಿಸು ಎಂದು ಕೆಲವರು ಹೇಳಿದರು. ಈ ಸಲಹೆಯು ಕಾಳೀಕೃಷ್ಣನಿಗೆ ತುಂಬ ಹಿಡಿಸಿತು. ಶ್ರೀಮಾತೆಯವರ ಅನುಮತಿ ಕೋರಿ, ಆಶೀರ್ವಾದ ಬೇಡಿ, ಅವರಿಗೆ ತನ್ನೆಲ್ಲಾ ಅಶಾಂತಿ–ಅಡೆತಡೆಗಳ ವಿಚಾರವನ್ನು ತೋಡಿಕೊಂಡು ವಿಸ್ತಾರವಾಗಿ ಪತ್ರ ಬರೆದನು. ಆ ಪತ್ರದಿಂದ ಆಯ್ದ ಭಾಗ ಹೀಗಿದೆ:

ನಂ. ೩೯, ನಾರಿಕೇಲ್‌ಡಾಂಗಾ ಮೇನ್‌ರೋಡ್,
ಕೊಲ್ಕತಾ.

ಂ೧೪ ಆಶ್ವಯುಜ ೧೩೦೨[೩]

ಪರಮಪೂಜ್ಯರೂ, ಪರಮಾರಾಧ್ಯರೂ ಆದ ಶ್ರೀಮಾತೆಯವರ ಚರಣಗಳಲ್ಲಿ–

ಪೂಜ್ಯ ಮಾತೆ, ಹಿಂದೆ ನಾನು ಮಲೇರಿಯಾದಿಂದ ನರಳುತ್ತಿದ್ದುದರಿಂದ ನೀವು ದುಃಖಪಟ್ಟು, ಮತ್ತು ಇನ್ನಿತರ ಕಾರಣಕ್ಕಾಗಿ ನಾನು ಮನೆಗೆ ಹೋಗಿ ಅಲ್ಲಿದ್ದರೆ ಆನಂದದಿಂದಿರಬಹುದೆಂದು ಭಾವಿಸಿ, ಹಾಗೇ ಮಾಡಲು ಹೇಳಿದಿರಿ. ಆಗ ನನ್ನ ಮೇಲೆ ಎಷ್ಟೊಂದು ಕೃಪೆಯ ಮಳೆಗರೆದಿರಿ! ನಾನೂ ಮನೆಗೆ ಬಂದು ಮೊದಲ ವರ್ಷವನ್ನು ನಿಮ್ಮ ಮಾತಿನಂತೆಯೇ ಸಾಕಷ್ಟು ಸಾಧನೆ ಮಾಡುತ್ತ ಕಳೆದೆ. ಆಗ ನನ್ನ ಸ್ವಲ್ಪ ಸಮಯ ವೃಥಾ ನಷ್ಟವಾಗುತ್ತಿರಲಿಲ್ಲ... ಈಗಂತೂ ೫–೬ ಗಂಟೆಗಳ ಸಮಯವೂ ದೊರೆಯದು; ಮೂವತ್ತು ಸಾವಿರ ಜಪ ಕೂಡ ಮಾಡಲಾಗುತ್ತಿಲ್ಲ. ಹಿಂದೆ ತುಂಬ ಜಪ ಮಾಡುತ್ತಿದ್ದೆ. ನನ್ನ ಮನಸ್ಸಿಗೆ ಅಷ್ಟೊಂದು ಸಾಮರ್ಥ್ಯವಿತ್ತು. ಆದರೆ ಈಗ ಅದು ಅತ್ಯಂತ ದುರ್ಬಲವಾಗಿದ್ದು, ಹಲವು ಬಗೆಯ ಆಸಕ್ತಿಗಳಿಂದ ನನ್ನನ್ನು ಕುಣಿಸುತ್ತಿದೆ ಹಾಗೂ ಅಧ್ಯಾತ್ಮ ಭಾವ ಒಮ್ಮೆಗೇ ಕಳೆದುಹೋದಂತಾಗಿದೆ..... ಅಮ್ಮಾ, ನೀವು ಅನುಮತಿ ನೀಡುವುದಾದರೆ ನಾನು ಈಗಲೇ, ಒಬ್ಬನೇ ಬೃಂದಾವನಕ್ಕೆ ಹೊರಡುವೆ. ಅಲ್ಲಿ ಬಾಬುರಾಮ ಬಾಬು[೪] ಮತ್ತು ಸುಬೋಧ ಬಾಬು ಇದ್ದಾರೆ. ಬಲರಾಮ ಬಾಬುವಿನ ಕುಂಜದಲ್ಲಿ (ಗೃಹ ದೇವಾಲಯದಲ್ಲಿ) ಊಟ, ವಸತಿಗೇನೂ ತೊಂದರೆಯಿಲ್ಲ. ನಾನು ಅವರೊಂದಿಗಿದ್ದರೆ ಯಾವ ಕಷ್ಟವೂ ಆಗದು. ಅಲ್ಲದೆ, ನಾನೇನೂ ಅಲ್ಲಿ ಒಬ್ಬನೇ ಇರಬೇಕಾಗಿಯೂ ಇಲ್ಲ. ಅಕಸ್ಮಾತ್ ಬಾಬುರಾಮ್ ಬಾಬು ಅಥವಾ ಸುಬೋಧ ಬಾಬು ಕೊಲ್ಕತ್ತೆಗೆ ಹಿಂತಿರುಗಿದರೆ ಮಠದವರು ಮತ್ತಾರು ಅಲ್ಲಿ ಇರುತ್ತಾರೋ ಅವರೊಂದಿಗಿರುವೆ. '...ಚಿಕ್ಕಹುಡುಗ ಎಲ್ಲಿಗೆ ಹೋಗುತ್ತಾನೋ, ಎಷ್ಟು ಕಷ್ಟ ಪಡುತ್ತಾನೋ' ಎಂದು ನೀವೇನೂ ಭಯಪಡಬೇಡಿ. ಇಲ್ಲಿ ನಾನೇನು ಕಡಿಮೆ ಕಷ್ಟ ಅನುಭವಿಸುತ್ತಿರುವೆನೇನು? ಇಷ್ಟು ದಿನ ಹೇಗೋ ಸಹಿಸಿಕೊಂಡಿದ್ದೆ. ನಿಮಗೆ ಏನನ್ನೂ ಹೇಳಿರಲಿಲ್ಲ. ನೀವು ಕೇಳಿದಾಗೆಲ್ಲಾ 'ಚೆನ್ನಾಗಿದ್ದೇನೆ' ಎಂದಷ್ಟೇ ಹೇಳುತ್ತಿದ್ದೆ. ಈ ಜನ ನಾನು ಸಹಿಸಿದಷ್ಟೂ ನನ್ನನ್ನು ಕಬಳಿಸುತ್ತಿದ್ದಾರೆ....

ಅಮ್ಮಾ, ನಾನು ನಿಮ್ಮ ಕೃಪೆಗೆ ಅಪಾತ್ರ. ತಾಯಿ, ಒಬ್ಬಾತ ಮತ್ತೊಬ್ಬನಿಂದ ಪ್ರೀತಿ–ವಿಶ್ವಾಸ ಗಳಿಸಿದರೆ ಅವನ ಮೇಲೆ ಆಕರ್ಷಣೆ ಅಥವಾ ಪ್ರೀತಿ ಸಹಜವಾಗಿ ಉಂಟಾಗುತ್ತದಲ್ಲವೆ? ಆದರೆ ಇದೇನಿದು ವಿಚಿತ್ರ, ತಾವು ಮಾನವರೂಪಿಣಿಯಾಗಿ ಬಂದಿದ್ದು, ಊಹಿಸಲೂ ಆಗದ ರೀತಿಯಲ್ಲಿ ಆದರ–ಪ್ರೀತಿ–ಮಮತೆ–ದಯೆಯನ್ನು ನನ್ನ ಮೇಲೆ ತೋರಿದಿರಿ. ಆದರೂ ಈ ಅಭಾಗ್ಯನಿಗೆ ನಿಮ್ಮನ್ನು ಪ್ರೀತಿಸಲಾಗುತ್ತಿಲ್ಲ... ಅಮ್ಮಾ, ನೀವು ನನಗೆ ನನ್ನ ಇಷ್ಟಾರ್ಥ ಸಿದ್ಧಿಸುತ್ತದೆಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಅದೇನು ಕ್ರಮೇಣ ಆಗುವುದೇ, ಅಥವಾ ಒಂದು ದಿನ ಹಠಾತ್ತಾಗಿ ಆಗುವುದೆ? ಕ್ರಮವಾಗಿ ಆಗುವುದಾದರೆ, ಇಷ್ಟು ದಿನಗಳಲ್ಲಿ (೨–೩ ವರ್ಷ) ಒಂದು ಸ್ವಲ್ಪವಾದರೂ ಆಗುತ್ತಿತ್ತಲ್ಲವೆ? ನಿಮ್ಮ ಸ್ವಭಾವಸಿದ್ಧ ಗುಣದಿಂದಲೇ ದಯೆ ತೋರಿ. ಇಂದು ಮಠದಲ್ಲಿ ಯಾರು ಸಂನ್ಯಾಸಿಗಳಾಗಿದ್ದಾರೋ ಅವರೇನು ಆತನ ಕೃಪೆಯಿಂದಲ್ಲದೆ, ಸ್ವಶಕ್ತಿಯಿಂದಲೇ ಸಂಸಾರ ತ್ಯಾಗ ಮಾಡಿದ್ದಾರೇನು? ನಿಮ್ಮ ಕೃಪೆಯೇನಾದರೂ ಇದ್ದರೆ ಅಲ್ಪನಾದ ನಾನೂ ಸಹ ಸಂನ್ಯಾಸಿಯಾಗಲು ಸಾಧ್ಯವಿಲ್ಲವೇನು? ಅಮ್ಮ, ಖೇಲಾತನು[೫] ನಿಮ್ಮನ್ನೊಮ್ಮೆ ಹೀಗೆ ಪ್ರಶ್ನಿಸಿದ್ದನು 'ನಿಮಗಾವುದು ಅಸಾಧ್ಯ?' ಅದಕ್ಕೆ ನೀವು ಹೇಳಿದ್ದಿರಿ, 'ನನಗಸಾಧ್ಯವಾದದ್ದು ಅವರು.' ಯಾವ ಅರ್ಥದಲ್ಲಿ ಅದನ್ನು ಹೇಳಿದ್ದಿರೋ ನಾನರಿಯೆ! ಆದರೆ ಶಾರದಾ ಮಹಾರಾಜರ[೬] ಬಾಯಿಂದ ಕೇಳಿದ್ದೆ, ಅವರು[೭] ನಿಮ್ಮ ವಿಷಯವಾಗಿ ಹೇಳಿದ್ದರು, 'ರಾಧೆಯ ಮಾಯೆಯು ಅನಂತ; ಹೇಳಲು ಅಸದಳವಾದದ್ದು. ಕೋಟಿ ಕೃಷ್ಣ, ಕೋಟಿ ರಾಮರು ಬಂದರು, ಇದ್ದು ಹೋದರು' ಎಂದು. ಆದ್ದರಿಂದ ನೀವು ಮನಸ್ಸು ಮಾಡಿದರೆ ಎಲ್ಲವನ್ನೂ ಮಾಡಬಲ್ಲಿರಿ... ನಿಮ್ಮ ಅನುಮತಿಯ ನಿರೀಕ್ಷಣೆಯಲ್ಲಿ....

ಅಮ್ಮಾ, ನಿಮ್ಮ ಅಯೋಗ್ಯಪುತ್ರ,
ಕಾಳೀಕೃಷ್ಣ

**ಶ್ರೀಮಾತೆಯವರ ಉತ್ತರದಿಂದ ಆಯ್ದ ಭಾಗ:**

ಜಯರಾಂಬಾಟಿ
೧೩೦೨ನೇ ವರ್ಷ ೨೦ನೇ ಆಶ್ವಯುಜ

ಚಿರಂಜೀವಿಗೆ,

ಪರಮ ಆಶೀರ್ವಾದಗಳು.

ಮಗು, ನಿನಗೆ ತೊಂದರೆಯಾಗುತ್ತಿದೆ ಎಂದು ಕೇಳಿ ತುಂಬಾ ದುಃಖವುಂಟಾಯಿತು. ನೀನು ಶ್ರೀ ಬೃಂದಾವನ ಧಾಮಕ್ಕೆ ಹೋಗಿ

೩ ಇದು ಬಂಗಾಳೀ ವರ್ಷ, ಮಾಸ. ಅಂದರೆ, ಅಕ್ಟೋಬರ್, ೧೮೯೫ನೇ ಇಸವಿ.

೪ ಆವರೆಗೂ ಮಠದ ಸಂನ್ಯಾಸಿಗಳನ್ನು ಮನೆಯ ಹೆಸರಿನಿಂದಲೇ ಗುರುತಿಸುತ್ತಿದ್ದರು. ಹೆಸರಿನೊಂದಿಗೆ 'ಬಾಬು' ಎಂದೂ ಸೇರಿಸುತ್ತಿದ್ದರು (ಗೌರವಾರ್ಥ).

೫ ಹಿಂದೆಯೇ ತಿಳಿಸಿದಂತೆ ಈತನು ಕಾಳೀಕೃಷ್ಣನ ಆಧ್ಯಾತ್ಮಿಕ ಸ್ನೇಹಿತ – ಖೇಲಾತ್ ಚಟ್ಟೋಪಾಧ್ಯಾಯ.

೬ ಸ್ವಾಮಿ ತ್ರಿಗುಣಾತೀತಾನಂದರು.

೭ ಶ್ರೀರಾಮಕೃಷ್ಣರು.

ಗೋವಿಂದಜೀ ದರ್ಶನ ಮಾಡಿದರೆ ತುಂಬ ಒಳ್ಳೆಯದೇ. ನಿನ್ನ ತಂದೆ-ತಾಯಿಗಳ ಅನುಮತಿ ಪಡೆದು ಗೋವಿಂದಜೀ ದರ್ಶನಕ್ಕೆ ಹೋಗಿ ಬಾ. ವಿಜಯ್, ಖಗೇನ್, ಸುಶೀಲ್, ಖೇಲಾತ್, ಶಶಿ, ಫಣಿ, ಹರಿಪದ, ಕನ್ಹಾಯ್ ಮುಂತಾದವರಿಗೆ ನನ್ನ ಆಶೀರ್ವಾದ ತಿಳಿಸು... ನಿನ್ನ ತಾಯಿಗೂ ನನ್ನ ಆಶೀರ್ವಾದ ತಿಳಿಸು.

ಇತಿ, ನಿನ್ನ ತಾಯಿ

೭

ಶ್ರೀಮಾತೆಯವರ ಆಶೀರ್ವಾದ, ಅನುಮತಿಗಳನ್ನು ಪಡೆದ ಕಾಳೀಕೃಷ್ಣನು, ತಾನು ಸಂಕಲ್ಪಿಸಿದ್ದನ್ನು ಕಾರ್ಯರೂಪಕ್ಕೆ ತರಲು ತಡಮಾಡಲಿಲ್ಲ. ಆಲಂಬಜಾರ್ ಮಠಕ್ಕೆ ಹೋಗಿ ಎಲ್ಲರನ್ನೂ ಭೇಟಿ ಮಾಡಿ ಬಂದನು. ದೂರ ಹೊರಟು ಹೋಗುತ್ತಿದ್ದಾನೆ, ಯಾವಾಗ ಹಿಂತಿರುಗಿ ಬರುವುದೆಂದು ತಿಳಿದಿಲ್ಲ. ಆದ್ದರಿಂದ ಶ್ರೀಮಾತೆಯವರ ದರ್ಶನ ಮಾಡಲು ಜಯರಾಂಬಾಟಿಗೆ ಹೋದನು. ಅವನನ್ನು ನೋಡಿ ಶ್ರೀಮಾತೆಯವರಿಗೆ ತುಂಬಾ ಆನಂದವುಂಟಾಯಿತು. ಅವರು ಅವನನ್ನು 'ಶ್ರೀರಾಮಕೃಷ್ಣರಲ್ಲಿ ನಿನಗೆ ಅಚಲವಾದ ಭಕ್ತಿಯುಂಟಾಗಲಿ' ಎಂದು ಆಶೀರ್ವದಿಸಿದರು. ಕಾಳೀಕೃಷ್ಣನು ೧೮೯೫ರ ಅಕ್ಟೋಬರ್ ೨೦ರಂದು ಬೃಂದಾವನಕ್ಕೆ ಹೊರಟು, ಮಾರ್ಗಮಧ್ಯದಲ್ಲಿ ಕಾಶಿಯಲ್ಲಿ ಇಳಿದನು. ಸುಮಾರು ಎರಡು ವರ್ಷಗಳ ಕಾಲ ಮನೆಯಲ್ಲಿದ್ದು, ಈಗ ಮತ್ತೆ ಸಂನ್ಯಾಸಿ ಸಂಘಕ್ಕೆ ಬರಲು ಸಾಧ್ಯವಾದದ್ದರಿಂದ ಅವನ ಆನಂದಕ್ಕೆ ಪಾರವಿಲ್ಲದಂತಾಯಿತು. ಕಾಶಿಗೆ ತಲುಪಿದ ನಂತರ ಶ್ರೀಮಾತೆಯವರಿಗೆ ಅವನು ಒಂದು ಪತ್ರ ಬರೆದನು:

''.....ಅಮ್ಮಾ, ನಿಮ್ಮದು ಅಪಾರ ಕರುಣೆ. ಕೇವಲ ಅವಿಶ್ವಾಸದಿಂದಾಗಿಯೇ ನನಗೀ ದುರ್ದಸೆ. ಅಮ್ಮಾ, ನಿಮ್ಮನ್ನು ನಾನೆಂದೂ ಮರೆಯದೆ ಇರುವಂತಾಗಲಿ... ನೀವು ನನಗೆ ಇನ್ನೇನು ಕೊಟ್ಟರೂ ಬಿಟ್ಟರೂ ಸರಿಯೇ, ಆದರೆ ನಿಮ್ಮ ಶ್ರೀಚರಣಗಳಲ್ಲಿ ಅಚಲವಾದ ಹೃತ್ಪೂರ್ವಕ ಭಕ್ತಿಯುಂಟಾಗಲು ಏನು ಬೇಕೋ ಅದನ್ನು ಮಾತ್ರ ಕೊಡಲೇಬೇಕು.... ಅಮ್ಮ, ನನ್ನ ಭಾರವನ್ನೆಲ್ಲ ನಿಮಗೇ ವಹಿಸಿರುವೆ. ನೀವು ಮಾತ್ರ ನನ್ನ ಕೈಬಿಡಬೇಡಿ, ಬಿಟ್ಟರೆ ನಾನು ಬಿದ್ದಂತೆಯೇ. ಯಾವ ಭಾವದಲ್ಲಿದ್ದರೆ, ಯಾವ ಪಥವನ್ನವಲಂಬಿಸಿದರೆ, ನಿಮ್ಮ ಶ್ರೀಚರಣಕಮಲಗಳಲ್ಲಿ ನಾನು ಬೇಗನೆ ಅರಳುವಂತಾಗುವೆನೋ, ಬಲವಂತವಾಗಿಯಾದರೂ ಸರಿ, ನೀವು ನನ್ನನ್ನು ಆ ದಿಕ್ಕಿನಲ್ಲಿಯೇ ಕರೆದೊಯ್ಯಿರಿ...

ಅಮ್ಮಾ, ನಿಮ್ಮ ಪ್ರೀತಿಯ

ಕಾಳೀಕೃಷ್ಣ

ಪುನಶ್ಚ—

ಅಮ್ಮಾ, ರಾಖಾಲ್ ಬಾಬು ಮತ್ತು ಯೋಗಿನ್ ಬಾಬುಗಳ ಮಾತಿನ ಮೇರೆಗೆ ನಾನೀಗ ಕಾಷಾಯವಸ್ತ್ರವನ್ನು ಧರಿಸುತ್ತಿರುವೆ.''



ಸ್ವಾಮಿ ಅದ್ವೈತಾನಂದರು

ಶ್ರೀರಾಮಕೃಷ್ಣರ ಸಂನ್ಯಾಸೀ ಶಿಷ್ಯರಲ್ಲೊಬ್ಬರಾದ ಸ್ವಾಮಿ ಅದ್ವೈತಾನಂದರು (ಬಡೋ ಗೋಪಾಲ್ ದಾದಾ) ಈ ಸಮಯದಲ್ಲಿ ಕಾಶೀಧಾಮದ ಬಂಗಾಲಿ ಟೋಲಾದ ವಂಶೀಧರ ದತ್ತರ ಮನೆಯಲ್ಲಿ ಇಳಿದುಕೊಂಡಿದ್ದರು. ಕಾಳೀಕೃಷ್ಣನೂ ಅವರೊಂದಿಗೆ ಈಗ ಇಳಿದುಕೊಂಡನು. ವೃದ್ಧರಾಗಿದ್ದರೂ ಅದ್ವೈತಾ ನಂದರ ಜೀವನವು ಅತ್ಯಂತ ನಿಯಮ, ನಿಷ್ಠೆಗಳಿಂದ ಕೂಡಿತ್ತು. ಅವರ ನಿರಾಡಂಬರ ವಾಸಗೃಹದ ಅತಿ ಅಚ್ಚುಕಟ್ಟುತನ, ಸಮಯ ನಿಷ್ಠೆ ಹಾಗೂ ಸ್ವಾವಲಂಬನೆಗಳನ್ನು ಕಂಡು ಕಾಳೀಕೃಷ್ಣನು ತುಂಬ ಪ್ರಭಾವಿತನಾದನು. ಕಾಳೀಕೃಷ್ಣನ ಸ್ವಭಾವವೂ ಅದೇ ರೀತಿಯಾದ್ದರಿಂದ ಗೋಪಾಲ್ ದಾ ಅವನನ್ನು ತುಂಬ ಪ್ರೀತಿಸತೊಡಗಿದರು. ಅವರು ಕಾಳೀಕೃಷ್ಣನಿಗೆ, ''ಕಾಶಿ ವಿಶ್ವೇಶ್ವರನ ರಾಜ್ಯ, ಇಲ್ಲಿಯೇ ಇದ್ದುಬಿಡು, ಬೃಂದಾವನಕ್ಕೆ ಹೋಗಿ ಏನಾಗಬೇಕಾಗಿದೆ?'' ಎಂದು ಸಲಹೆ ಇತ್ತರು. ಆದರೆ ಕಾಳೀಕೃಷ್ಣನು ಒಪ್ಪಲಿಲ್ಲ; ಏಕೆಂದರೆ ಬೃಂದಾವನಕ್ಕೆ ಹೋಗುವ ಆಕಾಂಕ್ಷೆ ಅವನಲ್ಲಿ ಆಗ ಪ್ರಬಲವಾಗಿತ್ತು. ಮೇಲಾಗಿ, ಶ್ರೀಮಾತೆಯವರಿಗೂ ಹಾಗೆಂದು ಹೇಳಿ ಬಂದದ್ದಾಗಿದೆ. ಅಕ್ಟೋಬರ್ ೨೯ರಂದು ಶ್ರೀಮಾತೆಯವರ ಆಶೀರ್ವಾದವನ್ನು ಹೊತ್ತ ಪತ್ರವೊಂದು ಬಂತು. ಅದರಲ್ಲಿ ಶ್ರೀಮಾತೆ, ''ನಿನಗಂತೂ ನಾನು ಆಶೀರ್ವಾದ ಮಾಡಿಯೇ ಇದ್ದೇನೆ. ನಿಮ್ಮೆಲ್ಲರಿಗೋಸ್ಕರ ನಾನು ಸದಾ 'ಅವರಲ್ಲಿ' ಪ್ರಾರ್ಥಿಸುತ್ತಲೇ ಇರುತ್ತೇನೆ. ಆಗಾಗ ನಿನ್ನ ಯೋಗಕ್ಷೇಮ ತಿಳಿಸಿ ಪತ್ರ ಬರೆ. ಶ್ರೀಮಾನ್ ಗೋಪಾಲ್‌ಗೆ ನನ್ನ ಆಶೀರ್ವಾದ ತಿಳಿಸು ಮತ್ತು ಆಗಾಗ್ಗೆ ಅಲ್ಲಿಯ ಸಮಾಚಾರ ತಿಳಿಸಲು ಹೇಳು... ಸಾವಧಾನದಿಂದಿರು, ಸರ್ವದಾ 'ಅವರತ್ತ' ದೃಷ್ಟಿಯನ್ನಿಟ್ಟು ನಡೆಯಲು ಪ್ರಯತ್ನಿಸು'' ಎಂದು ಬರೆದಿದ್ದರು. ಅದಕ್ಕೆ ಪ್ರತ್ಯುತ್ತರವಾಗಿ ಕಾಳೀಕೃಷ್ಣನು ಹೀಗೆ ಬರೆದನು: ''...ಅಮ್ಮಾ, ನೀವು ನನಗೆ 'ಸರ್ವದಾ ಅವರತ್ತ' ದೃಷ್ಟಿಯನ್ನಿಟ್ಟು ನಡೆ ಎಂದು ಬರೆದಿರುವಿರಿ, ಅದು ನನ್ನಿಂದ ಹೇಗೆ ತಾನೇ ಸಾಧ್ಯ? ನನ್ನ ಮನಸ್ಸಂತೂ ನನ್ನ ವಶದಲ್ಲಿಲ್ಲ; ನೀವು ಕೃಪೆಯಿಟ್ಟು ನನ್ನ ದೃಷ್ಟಿಯನ್ನು ಅವರಲ್ಲಿರಿಸಿ. ಇದೇ ನನ್ನ ಒತ್ತಾಯದ ಬೇಡಿಕೆ.''

*(ಮುಂದುವರಿಯುವುದು)*